ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

ಸಂಕೇತ ಸಂಖ್ಯೆ : **33-K**

**Code No. : 33-K**

**A**

**CCE RF**
**CCE RR**
**REVISED**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

ದಿನಾಂಕ : 01. 04. 2020 ] [ Date : 01. 04. 2020

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

## ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು 38 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಸಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : $4 \times 1 = 4$

1. ದ್ವಿತೀಯ ವಿಭಕ್ತಿಗೆ ಉದಾಹರಣೆಯಾದ ಪದ

(ಎ) ಶಾಲೆಯು (ಬಿ) ಗೂಡನ್ನು

(ಸಿ) ಮನೆಯಿಂದ (ಡಿ) ಮರಕ್ಕೆ

2. ಲೋಪ ಸಂಧಿಗೆ ಉದಾಹರಣೆಯಾಗಿರುವ ಪದ

(ಎ) ಮಾತಿಲ್ಲ (ಬಿ) ಕಾಶಿಯಲ್ಲಿ

(ಸಿ) ದೇವಾಲಯ (ಡಿ) ವೀರೇಶ

3. 'ಬಾಂದಳ' ಪದದ ಅರ್ಥ

(ಎ) ತಾವರೆ (ಬಿ) ದುಡಿಮೆ

(ಸಿ) ಆಕಾಶ (ಡಿ) ಗುರುತು

4. ದಿಗ್ವಾಚಕ ಪದವಿದು

(ಎ) ಕೆಲವು (ಬಿ) ನಾವು

(ಸಿ) ಕರ್ನಾಟಕ (ಡಿ) ಪಡುವಣ

II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : $12 \times 1 = 1$

5. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು ?

6. ತಾಯಿ ಸಿದ್ದಮ್ಮ ಪಂಚಾಕ್ಷರ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?

7. ಗಾಲ್ಫ್ ಚೆಂಡು, ಈರುಳ್ಳಿ ಸಿಪ್ಪೆಗಳಿಂದ ಗೂಡನ್ನು ಅಲಂಕರಿಸಿದ ಹಕ್ಕಿ ಯಾವುದು ?

8. ಗುರುಗಳು ಜೀವನವನ್ನು ಯಾವುದಕ್ಕೆ ಹೋಲಿಸಿದ್ದಾರೆ ?

9. ಲಂಡನ್‌ನ 'ವ್ಯಾಕ್ಸ್ ಮ್ಯೂಸಿಯಂ'ನ್ನು ಯಾವ ಹೆಸರಿನಿಂದ ಕರೆಯುತ್ತಾರೆ ?

10. ಗೋಪಾಲನು ಹೊಸ ಪಂಚೆಯನ್ನು ಏಕೆ ಬಯಸಿದನು ?

11. ಬರಡು ಜೀವಕೆ ಹೊಸ ಚೈತನ್ಯ ಸಿಗುವುದು ಯಾವಾಗ ?

12. ಮನಸ್ಸು ಯಾವಾಗ ನೆಲೆಯಿರದೆ ತೊಳಲುತ್ತದೆ ?

13. ಕುಣಿಗಲ್ ಕೆರೆ ಹೇಗೆ ಬಾಗಿದೆ ?

14. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?

15. ಉತ್ತರನಿಗೆ ಬಲಗಡಲಿನಂತೆ ಕಂಡ ಸೈನ್ಯ ಯಾವುದು ?

16. ಉತ್ತರನಿಗೆ ಇಂದ್ರಪದವಿಯು ಏಕೆ ಬೇಕಿಲ್ಲ ?

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $8 \times 2 = 16$

17. ರೈತರು ಉಳುವುದನ್ನು ಬಿಟ್ಟು ಸತ್ಯಾಗ್ರಹ ಮಾಡಿದರೆ ಉಂಟಾಗುವ ಸಮಸ್ಯೆಗಳಾವುವು ?

18. ಅಸಿಗಿಂತ ಮಸಿ ಶ್ರೇಷ್ಠವಾದುದು ಏಕೆ ?

19. ಹಕ್ಕಿಗಳು ಗೂಡುಗಳನ್ನು ಏಕೆ ನಿರ್ಮಿಸುತ್ತವೆ ?

20. ಮ್ಯೂಸಿಯಂನ 'ಛೇಂಬರ್ ಆಫ್ ಹಾರರ್ಸ್'ನಲ್ಲಿ ಲೇಖಕರು ಏಕೆ ಅಂಜಿದರು ?

21. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು ?

22. ಕುಣಿಗಲ್ ಕೆರೆಯ ಅಂದವನ್ನು ಹೇಗೆ ವರ್ಣಿಸಲಾಗಿದೆ ?

23. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆ ಹೇಗೆ ?

24. ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ ?

[ Turn over

IV. ಕೆಳಗಿನ ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3

25. ಕುವೆಂಪು

V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3

26. ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ
ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು
ಕೂಡಲ ಸಂಗಮದೇವ

VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3

27. "ಕುಣಿಗಲ್ ಕೆರೆ ಬಾಳೆಯ ಹಣ್ಣಿನಂತೆ ಬಾಗಿದೆ"

VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3

28. "ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು"

ಅಥವಾ

"ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ"

VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 5 × 3 = 15

29. "ಇಂಥಹ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ ?"

30. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ."

31. "ನೀವೇ ಕಾಫೀ ಹಾಕಿಕೊಳ್ಳಿ, ಆಮೇಲೆ ಕುಳಿತು ಮಾತನಾಡೋಣ."

32. "ನನಗೆ ಬೀಳುವ ಭಯವಿಲ್ಲ."

33. "ಒಂದು ಜೀವನಕೇಕೆ ಹಲವು ಸಾಧ್ಯಗಳು ?"

IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : $1 \times 4 = 4$

34. ಏಕಾಂಗಿ ವೀರನಂತೆ ..........................................

..........................................................

..........................................................

.......................................... ಕತ್ತಲಲ್ಲಿ ನಡೆದನು.

ಅಥವಾ

ಕಾಡು ಕಾಡು ಅಲೆದ ..........................................

..........................................................

..........................................................

.................................. ಮಹಾಬೆಳಕೊಂದು ಕಂಡಿತು.

X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

35. 'ಸದ್ದು ಮಾಡದಿರು' ಪದ್ಯದಲ್ಲಿ ನೀವು ಮೆಚ್ಚುವ ಸಂದೇಶವನ್ನು ವಿಸ್ತರಿಸಿ ಬರೆಯಿರಿ.

ಅಥವಾ

'ಸದ್ದು ಮಾಡದಿರು' ಪದ್ಯದ ಸಾರಾಂಶವನ್ನು ಮಾನವೀಯ ಮೌಲ್ಯಗಳೊಂದಿಗೆ ವಿವರಿಸಿ.

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

$1 \times 4 = 4 ( 2 + 2 )$

ಜಗತ್ತಿನ ಮೋಹಕ ಉದ್ಯಾನಗಳಲ್ಲೊಂದಾದ ಬೆಂಗಳೂರಿನ ಲಾಲ್‌ಬಾಗ್‌ನ ಚೆಲುವನ್ನು ಹೀರಿ ಹೀರಿ ತಣಿಯದವರಾರು ? ಆ ಹೆಸರನ್ನು ಕೇಳಿದೊಡನೆಯೆ ನಿಸರ್ಗ ಶಿವಾರಾಧಕರು ರಸಸಮಾಧಿಯಲ್ಲಿ ಮುಳುಗೇಳುತ್ತಾರೆ. ಪುಳಕಿತರಾಗುತ್ತಾರೆ. ಪ್ರತಿನಿತ್ಯವೂ ಸೂರ್ಯೋದಯ, ಸೂರ್ಯಾಸ್ತದ ಸಮಯದಲ್ಲಿ ದೇವತೆಗಳು ಭೂಮಿಗಿಳಿದು ಬಂದು ಸೌಂದರ್ಯವಾರಾಶಿಯಲ್ಲಿ ಮಿಂದು ಪುನೀತರಾಗುತ್ತಾರೆ.

ರಾಜ್ಯದ ಅನೇಕ ಉದ್ಯಾನಗಳಿಗೆ ಜನ್ಮವಿತ್ತ ಲಾಲ್‌ಬಾಗ್ 'ಉದ್ಯಾನರಾಣಿ' ಎಂಬ ಬಿರುದಿಗೆ ಪಾತ್ರವಾಗಿದೆ. ಇಂತಹ ಉದ್ಯಾನ ರಾಜ್ಯಕ್ಕೆ ಕಾರಣರಾದವರು ಯಾರು ? ಅವರೇ ಸಸ್ಯವಿಜ್ಞಾನಿ, ನಿಸರ್ಗ ಪ್ರೇಮಿ, ಸದಾರೈತ

ಹಿತಾಕಾಂಕ್ಷಿ ಡಾ. ಎಂ.ಹೆಚ್. ಮರಿಗೌಡರು. ನೋಬೆಲ್ ಪ್ರಶಸ್ತಿ ವಿಜೇತ ಸಿ.ವಿ. ರಾಮನ್‌ರವರು ಲಾಲ್‌ಬಾಗ್‌ನ ಅತಿಶಯ ಸೌಂದರ್ಯಕ್ಕೆ ಮಾರುಹೋಗಿ ಅದಕ್ಕೆ ಕಾರಣರಾದ ಡಾ. ಎಂ.ಹೆಚ್. ಮರಿಗೌಡರಿಗೆ ನಾಗರಿಕರು ಕೃತಜ್ಞರಾಗಿರಬೇಕೆಂದು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ರಾಜ್ಯದ ಬಂಜರು ಭೂಮಿಯ ಸಾಗುವಳಿ ಅತ್ಯಗತ್ಯವೆಂಬುದನ್ನು ಮೊಟ್ಟಮೊದಲಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟ ಕೀರ್ತಿಯು ಮರಿಗೌಡರಿಗೆ ಸಲ್ಲಬೇಕು. ಎಲ್ಲಕ್ಕಿಂತ ಮಿಗಿಲಾಗಿ ರೈತರ ಕ್ಷೇಮದ ಬಗೆಗಿನ ಅವರ ಕಳಕಳಿ ಅಸಾಧಾರಣವಾದದ್ದು. ಆರ್ಥಿಕ ಪ್ರಗತಿಗೆ, ವಾಣಿಜ್ಯಾಭಿವೃದ್ಧಿಗೆ, ಅಂತಾರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ಹೊಸ ದಾಖಲೆಯನ್ನು ನಿರ್ಮಿಸಬೇಕೆಂಬುದು ಮರಿಗೌಡರ ಹೇರಾಸೆ.

ಈ ಕಾರಣಗಳಿಂದ ಡಾ. ಮರಿಗೌಡರು ಕರ್ನಾಟಕದ ಹಾಗೂ ಭರತಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ.

ಗಿಡಗಳ ಸಮೃದ್ಧವಾದ ಬೆಳವಣಿಗೆಗೆ ನೀರು, ಗೊಬ್ಬರ, ಮಾತ್ರ ಸಾಲದು. ಮಾನವನ ಪ್ರೀತಿಯ ವರ್ಷವೂ ಬೇಕು. ಇಂತಹ ಪ್ರೀತಿಯನ್ನು ವರ್ಷಿಸುವ ತನ್ನ ಆತ್ಮವನ್ನು ನಿವೇದಿಸಿಕೊಳ್ಳುವ ವೃಕ್ಷಪ್ರೇಮಿಯ ಆಗಮನದಿಂದ ಇಡೀ ಲಾಲ್‌ಬಾಗೇ ಚೇತರಿಸಿಕೊಂಡಿದೆ. ಕನ್ನಡನಾಡಿನ ಮಣ್ಣು ಪುಳಕಗೊಂಡಿದೆ.

36. ಪ್ರಶ್ನೆಗಳು :

ಅ) ಲಾಲ್‌ಬಾಗ್ ಕಂಡಾಗ ನಿಸರ್ಗ ಶಿವಾರಾಧಕರಿಗೆ ಆಗುವ ಅನುಭವಗಳೇನು ?

ಬ) ಮರಿಗೌಡರು ಭರತಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಹೇಗೆ ಅಜರಾಮರರಾಗಿದ್ದಾರೆ ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** 1 × 4 = 4

37. ಅರಣ್ಯ ಸಂರಕ್ಷಣೆ

**ಅಥವಾ**

ಶೈಕ್ಷಣಿಕ ಪ್ರವಾಸ

XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5

38. ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ 'ರವಿ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆರೋಗ್ಯ ತಪಾಸಣೆ ಕೈಗೊಳ್ಳುವಂತೆ ಕೋರಿ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಯವರಿಗೆ ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ 'ಕಾವ್ಯ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ 'ಕನ್ನಡ ರಾಜ್ಯೋತ್ಸವ' ಕಾರ್ಯಕ್ರಮದ ವಿವರವನ್ನು ತಿಳಿಸಿ ಮಂಗಳೂರಿನ ದೇವಸ್ಥಾನ ಬೀದಿಯ ನಿವಾಸಿಯಾದ 'ಪ್ರತಿಭಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.